## ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7461/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 26/04/2017

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಬೆನೆಡಿಕ್ಟ್ ಡಿಸೋಜ, ನಿಟ್ಟೆ ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀಮತಿ ಬೆನೆಡಿಕ್ಟ್ ಡಿಸೋಜ ಇವರು ಗೌರವಾನ್ವಿತ ಲೋಕಾಯುಕ್ತರಿಗೆ ಅವರ ದಿ:22/11/2014ರ ಉಡುಪಿ ಕ್ಯಾಂಪಿನಲ್ಲಿ ದೂರೊಂದನ್ನು ಸಲ್ಲಿಸಿ, ತಾವು ಕಾರ್ಕಳ ತಾಲ್ಲೂಕಿನ ನಿಟ್ಟೆ ಗ್ರಾಮದಲ್ಲಿ ವಾಸವಾಗಿದ್ದು, ತಮ್ಮ ಮನೆಯ ಪರಿಸರದಲ್ಲಿರುವ ಶ್ರೀ ಪ್ರಶಾಂತ್ ಕಾಮತ್‌ರವರಿಗೆ ಸೇರಿರುವ ದಾಮೋದರ್ ಕ್ರಷರ್ ಹಾಗೂ ಶ್ರೀ ದಿನೇಶ್ ಶೆಟ್ಟಿಯವರಿಗೆ ಸೇರಿರುವ ಮಹಾಗಣಪತಿ ಕ್ರಷರ್‌ಗಳಿಂದ ಆಸುಪಾಸಿನ ಜನರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ಇಲ್ಲಿ ಪ್ರತಿ ದಿನ ಬೆಳ್ಳಿಗೆ, ಮಧ್ಯಾಹ್ನ, ಸಂಜೆ ಸ್ಫೋಟಕಗಳನ್ನು ಬಳಸಿ ಕಲ್ಲುಗಳನ್ನು ಸಿಡಿಸುವುದರಿಂದ ಪರಿಸರದಲ್ಲಿನ ಮನೆಗಳ ಗೋಡೆಗಳು ಬಿರುಕು ಬಿದ್ದು ತೀವ್ರತರವಾದ ಹಾನಿಗೊಳಗಾಗಿರುತ್ತದೆ. ಮನೆಯ ಮೇಲೆ ಹಾಗೂ ಹಿತ್ತಲಿನಲ್ಲಿ ಕಲ್ಲುಚೂರುಗಳು ಬಿದ್ದಿರುತ್ತವೆ. ಪರಿಸರದ ನೀರು, ಇಂಗು ಗುಂಡಿ ಹಾಗೂ ಚರಂಡಿಗಳು ಕಲ್ಲು ಹಾಗೂ ಕಲ್ಲಿನ ಪುಡಿಯಿಂದ ತುಂಬಿ ಹೋಗಿರುತ್ತದೆ. ಇದರಿಂದ ಪರಿಸರ ಮಾಲಿನ್ಯ ಉಂಟಾಗಿರುತ್ತದೆ. ಕ್ರಷರ್‌ನಿಂದ ಬರುವ ಕಲ್ಲುಪುಡಿಯ ದೂಳಿನಿಂದ ವಾತಾವರಣ ಕಲುಷಿತಗೊಂಡಿರುತ್ತದೆ. ಕುಡಿಯುವ ನೀರು ಸಹ ಕಲುಷಿತವಾಗಿರುತ್ತದೆ. ರಾತ್ರಿ ಕ್ರಷರ್‌ನಲ್ಲಿ ಬಾರಿ ಶಬ್ದ ಉಂಟಾಗುವುದರಿಂದ ಶಬ್ದ ಮಾಲಿನ್ಯದಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿರುತ್ತದೆ. ಈ ಕ್ರಷರ್ ಸಮೀಪದಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟ ದಟ್ಟವಾದ ಕಾಡು ಇದೆ ಇದರಿಂದ ಕಾಡು ಪ್ರಾಣಿಗಳು ಕಾಡಿನಿಂದ ಮನೆಗಳ ಪರಿಸರದಲ್ಲಿ ಕಾಣಿಸಿಕೊಳ್ಳುತ್ತಿವೆ. ಪ್ರಾಣಿಗಳಿಗೂ ಸಹ ರಕ್ಷಣೆ ಇಲ್ಲದಂತಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲವೆಂದು.

ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿಕೊಂಡಿದ್ದು, ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ. ಗೌರವಾನ್ವಿತರು ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಸಂಬಂಧಪಟ್ಟವರಿಗೆ ನೋಟೀಸ್ ನೀಡಿ ಸೂಕ್ತ ಕ್ರಮ ಜರುಗಿಸಬೇಕೆಂದು, ಗಣಿಗಾರಿಕೆಯಲ್ಲಿ ಸ್ಫೋಟಕವನ್ನು ಬಳಸುತ್ತಿದ್ದಲ್ಲಿ ಮತ್ತು ಸದರಿ ಸ್ಫೋಟಕ ಬಳಕೆಯು ಅಕ್ರಮವಾಗಿದ್ದಲ್ಲಿ ಈ ಬಗ್ಗೆ ಪೊಲೀಸರಿಗೆ ದೂರು ನೀಡಿ ಕ್ರಿಮಿನಲ್ ಪ್ರಕರಣದ ದಾಖಲಿಸಲು ಆದೇಶಿಸಿರುತ್ತಾರೆ. ಹಾಗೂ ಸದರಿ ಜಿಲ್ಲಾಧಿಕಾರಿಯವರ ವರದಿಯನ್ನು ನೀಡುವ ನಿಬಂಧನೆಯ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿರುತ್ತಾರೆ. ಜಿಲ್ಲಾಧಿಕಾರಿಗಳು ವರದಿ ಸಲ್ಲಿಸದೇ ಇದ್ದಲ್ಲಿ ದೂರುದಾರರು ದೂರು ನೀಡಿ ಪ್ರಕರಣ ಮುಂದುವರೆಸಲು ಅವಕಾಶವಿರುವುದಾಗಿ ತಿಳಿಸಿರುತ್ತಾರೆ.

2. ಗೌರವಾನ್ವಿತರ ಆದೇಶದಂತೆ ದೂರುದಾರರ ದೂರಿನ ಮೇರೆಗೆ ಜಂಟಿ ಮೋಜಣಿ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ ಎಂದು ಸದರಿ ಜಂಟಿ ಮೋಜಣಿ ಕಾರ್ಯವನ್ನು ದಿ:08/01/2015 ರಂದು ನಡೆಸಲಾಗಿದ್ದು, ಅದರಲ್ಲಿ, ತಹಶೀಲ್ದಾರ್, ಕಾರ್ಕಳ ತಾಲ್ಲೂಕು, ಹಿರಿಯ ಭೂ ವಿಜ್ಞಾನಿ, ದೂರುದಾರರು, ಕಲ್ಲು ಗಣಿ ಗುತ್ತಿಗೆದಾರರು ಮತ್ತು ಜಲ್ಲಿ ಕ್ರಷರ್ ಮಾಲೀಕರ ಸಮ್ಮುಖದಲ್ಲಿ ಕೈಗೊಳ್ಳಲಾಗಿರುತ್ತದೆ ಎಂದು ಸದರಿ ಜಂಟಿ ಮೋಜಣಿ ಕಾರ್ಯದಲ್ಲಿ ಕಂಡು ಬಂದಿದ್ದೇನೆಂದರೆ ಕಾರ್ಕಳ ತಾಲ್ಲೂಕು, ನಿಟ್ಟೆ ಗ್ರಾಮದ ಸರ್ವೆ ನಂ.354/ಪಿ1ಬಿ ಯಲ್ಲಿ 16 ಎಕರೆ ವಿಸ್ತೀರ್ಣದ ಜಮೀನಿದ್ದು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಕರ್ನಾಟಕ ಕಲ್ಲುಪುಡಿ ಮಾಡುವ ನಿಯಂತ್ರಣ ಆಧ್ಯಾದೇಶ 2011ರ ಷರತ್ತುಗಳನ್ನು ಪೂರೈಸಿದ ಮೇಲೆ, ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ ಸಮಿತಿಯು ದಿ:13/12/2012 ರಂದು ಅಧಿಸೂಚನೆಯನ್ನು ಜಾರಿ ಮಾಡಿ ಸುರಕ್ಷಿತ ವಲಯ ಎಂದು ಘೋಷಣೆ ಮಾಡಲಾಗಿರುತ್ತದೆ. ಸದರಿ ಪ್ರದೇಶದಲ್ಲಿ ಶ್ರೀ ಪ್ರಶಾಂತ್ ಕಾಮತ್‌ರವರಿಗೆ ಸೇರಿದ ಮೆ. ದಾಮೋದರ್ ಇನಫ್ರಾ ಅಂಡ್ ಮಿನರಲ್ಸ್ ಕ್ರಷರ್ ಘಟಕಕ್ಕೆ ದಿ:21/08/2013 ರಂದು ಫಾರಂ-'ಸಿ'(ಲೈಸೆನ್ಸ್) ನೀಡಲಾಗಿರುತ್ತದೆ. ಸದರಿ ಜಲ್ಲಿ ಕ್ರಷರ್ ಘಟಕಕ್ಕೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕಾರ್ಯಚರಣೆ ಅನುಮತಿ ಪ್ರಮಾಣ ಪತ್ರ ಬಂದಿರುವುದಿಲ್ಲ. ಸ್ಥಳ ಪರಿಶೀಲನಾ ಸಮಯದಲ್ಲಿ ಜಲ್ಲಿ ಕ್ರಷರ್ ಘಟಕವು ಕಾರ್ಯಚರಿಸುತ್ತಿರುತ್ತದೆ. ಸದರಿ ಜಲ್ಲಿ ಕ್ರಷರ್ ಘಟಕದಿಂದ ಸುಮಾರು 150.00 ಮೀ., ಅಂತರದ ಸರ್ಕಾರಿ ಜಾಗದಲ್ಲಿ ಅನಧೀಕೃತವಾಗಿ ಶ್ರೀ ಶ್ಯಾಮರಾಯ ಆಚಾರ್ಯ ಇವರು ನಿರ್ಮಿಸಿರುವ ವಾಸದ ಮನೆ ಇರುತ್ತದೆ. ದೂರುದಾರರಾದ ಶ್ರೀಮತಿ ಬೆನೆಡಿಕ್ಟ್ ಡಿಸೋಜ್ ರವರ ವಾಸದ ಮನೆಗೆ 1050 ಮೀ., ಅಂತರವಿರುತ್ತದೆ. ಶ್ರೀ ಪ್ರಶಾಂತ್ ಕಾಮಂತ್‌ರವರಿಗೆ ಕಾರ್ಕಳ ತಾಲ್ಲೂಕು ನಿಟ್ಟೆ ಗ್ರಾಮದ ಸರ್ವೇ ನಂಬರ್

354/ಪಿ1ಬಿ ಯ ಎರಡು ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಗಣಿ ಗುತ್ತಿಗೆ ಸಂಖ್ಯೆ:245 ಅನ್ನು ದಿ:09/04/2010 ರಂದು ಐದು ವರ್ಷಗಳ ಅವಧಿಗೆ ಉಪಕನಿಜ ರಿಯಾಯತಿ ನಿಯಮ 1994 ರಂತೆ ಗುತ್ತಿಗೆ ಮಂಜೂರಾತಿ ಮಾಡಲಾಗಿರುತ್ತದೆ. ಕಲ್ಲು ಗಣಿ ಮಾಲೀಕರು ಸ್ಫೋಟಕ ಬಳಸಲು ಲೈಸನ್ಸ್ ಹೊಂದಿರುವುದಾಗಿ ತಿಳಿಸಿದ್ದು, ಅದರ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಕಲ್ಲುಗಣಿ ಗುತ್ತಿಗೆ ಪ್ರದೇಶದಿಂದ ಶ್ರೀ ಶ್ಯಾಮರಾಯ ಆಚಾರ್ಯ ರವರ ವಾಸದ ಮನೆ ಸುಮಾರು 320.00 ಮೀ., ಅಂತರದಲ್ಲಿ ಇರುತ್ತದೆ. ಈಗಾಗಲೇ ಶ್ರೀ ದಿನೇಶ್ ಶೆಟ್ಟಿಯವರಿಗೆ ಸರ್ವೇ ನಂಬರ್ 354/ಪಿ1ಬಿ ಯಲ್ಲಿ ಸೇರಿದ್ದ ಶ್ರೀ ಮಹಾಗಣಿ ಕ್ರಷರ್‌ಗೆ ದಿ:21/08/2013 ರಂದು ಫಾರಂ–ಸಿ(ಲೈಸೆನ್ಸ್) ಅನ್ನು ನೀಡಲಾಗಿರುತ್ತದೆ. ಸದರಿ ಕ್ರಷರ್ ಘಟಕಕ್ಕೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕಾರ್ಯಾಚರಣೆ ಅನುಮತಿ ಪತ್ರ ಬಂದಿರುವುದಿಲ್ಲ. ಸ್ಥಳ ಪರಿಶೀಲನಾ ಕಾಲದಲ್ಲಿ ಕ್ರಷರ್ ಘಟಕವು ಕಾರ್ಯಚರಣೆಯಲ್ಲಿತ್ತೆಂದು ತಿಳಿಸಿರುತ್ತಾರೆ. ಶ್ರೀ ದಿನೇಶ್ ಶೆಟ್ಟಿರವರಿಗೆ ಕಾರ್ಕಳ ತಾಲ್ಲೂಕು ನಿಟ್ಟೆ ಗ್ರಾಮದ ಸರ್ವೇ ನಂಬರ್ 354/ಪಿ1ಬಿಯಲ್ಲಿ 1.50 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಕಲ್ಲುಗಣಿ ಗುತ್ತಿಗೆ ಸಂಖ್ಯೆ:2747 ಅನ್ನು ದಿ:21/06/2002 ರಂದು 10 ವರ್ಷಗಳ ಅವಧಿಗೆ ಕರ್ನಾಟಕ ಉಪಕನಿಖ ರಿಯಾಯತಿ ನಿಯಮ 1994 ರಂತೆ ಗುತ್ತಿಗೆ ಮಂಜೂರಾತಿ ನೀಡಲಾಗಿರುತ್ತದೆ. ಪ್ರಸ್ತುತ ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದು, ಗುತ್ತಿಗೆ ನವೀಕರಣ ಹಂತದಲ್ಲಿರುತ್ತದೆ. ಸದರಿ ಪ್ರದೇಶಕ್ಕೆ ಕಲ್ಲುಗಣಿಗಾರಿಕೆ ಅಧಿಸೂಚನೆ ಜಾರಿ ಮಾಡಲಾಗಿದ್ದು, ಪರಿಸರ ವಿಮೋಚನ ಪತ್ರ ಪಡೆಯುವುದಕ್ಕೆ ರಾಜ್ಯ ಪರಿಸರ ಆಘಾತ ಅಂದಾಜಿಕರಣ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಲಾಗಿದೆ ಎಂದು ಶ್ರೀ ದಿನೇಶ್ ಶೆಟ್ಟಿಯವರು ತಿಳಿಸಿರುತ್ತಾರೆ. ಕಲ್ಲುಗಣಿ ಗುತ್ತಿಗೆ ಪ್ರದೇಶದಿಂದ ಶ್ರೀ ಶ್ಯಾಮರಾಯ ಆಚಾರ್ಯ ಇವರ ವಾಸದ ಮನೆಯು ಸುಮಾರು 520.00 ಮೀ., ಹಾಗೂ ದೂರುದಾರರ ಮನೆಯು ಸುಮಾರು 1395 ಮೀ., ಅಂತರದಲ್ಲಿರುತ್ತದೆ. ಸ್ಥಳ ಪರಿಶೀಲನಾ ಸಮಯದಲ್ಲೂ ಕಲ್ಲು ಗಣಿಗಾರಿಕೆ ಚಾಲನೆಯಲ್ಲಿರಲಿಲ್ಲವೆಂದು ತಿಳಿಸಿರುತ್ತಾರೆ.

3. ಮುಂದುವರೆದು, ಸ್ಥಳ ಪರಿಶೀಲನಾ ಸಮಯದಲ್ಲಿ ಶ್ರೀ ಶ್ಯಾಮರಾಯ ಆಚಾರ್ಯರ ಮನೆಗೋಡೆಗಳನ್ನು ಪರಿಶೀಲಿಸಿದ್ದು, ಯಾವುದೇ ರೀತಿಯ ಬಿರುಕುಗಳು ಕಂಡು ಬಂದಿರುವುದಿಲ್ಲ. ಸದರಿ ಶ್ರೀ ಶ್ಯಾಮರಾಯ ಆಚಾರ್ಯರವರು ನಿರ್ಮಿಸಿರುವ ಮನೆ ಅನಧೀಕೃತವಾಗಿದ್ದು, ಯಾವುದೇ ದಾಖಲೆ ಇರುವುದಿಲ್ಲ. ಸದರಿ ಪ್ರದೇಶದಲ್ಲಿ ಕಲ್ಲುಗಣಿಯಲ್ಲಿನ ಸ್ಫೋಟಕದಿಂದ ಹಾಗೂ ಕ್ರಷರ್‌ನಿಂದ ಯಾವುದೇ ರೀತಿಯ ಹಾನಿ ಮತ್ತು ತೊಂದರೆಯಾಗಿರುವ ಬಗ್ಗೆ ದೂರಿರುವುದಿಲ್ಲ. ದೂರುದಾರರಾದ ಶ್ರೀಮತಿ ಬೆನೆಡಿಕ್ಟ್ ಡಿಸೋಜ್ ರವರ ಮನೆಯ ಗೋಡೆಗಳಲ್ಲಿ ಅಲ್ಲಲ್ಲಿ ಸಣ್ಣ ಬಿರುಕುಗಳು ಉಂಟಾಗಿರುವುದು ಕಂಡು ಬಂದಿರುತ್ತದೆ. ಮನೆಯ ಬಳಿಯ ಬಾವಿಯ ಕಲ್ಲುಗಳು ಕುಸಿದಿರುವುದು

ಕಂಡು ಬಂದಿರುವುದಿಲ್ಲ. ಸ್ಥಳ ಮಹಜರ್ ಕಾಲದಲ್ಲಿ ಹಾಜರಿದ್ದ ದೂರುದಾರರು ಸ್ಥಳ ಮಹಜರ್‌ಗೆ ಸಹಿ ಮಾಡಲು ನಿರಾಕರಿಸಿರುತ್ತಾರೆ. ಸ್ಥಳ ಪರಿಶೀಲನಾ ಕಾಲದಲ್ಲಿ ಹಾಜರಿದ್ದ ತಹಶೀಲ್ದಾರ್, ಕಾರ್ಕಳ ರವರು ಜಲ್ಲಿ ಕ್ರಷರ್ ಘಟಕ ಮತ್ತು ಕಲ್ಲುಗಣಿ ಗುತ್ತಿಗೆ ಪ್ರದೇಶಗಳು ಸಾಕಷ್ಟು ದೂರದಲ್ಲಿದ್ದು, ಆಸುಪಾಸಿನ ಮನೆಯವರ ಆಕ್ಷೇಪಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಆಸುಪಾಸಿನ ಮನೆಗಳಲ್ಲಿ ಬಿರುಕುಗಳು ಕಂಡು ಬಂದಿರುವುದಿಲ್ಲ. ದೂರುದಾರರು ಕಲ್ಲುಗಣಿಗಾರಿಕೆ ಪ್ರದೇಶದಲ್ಲಿ ಸ್ಫೋಟಕ ಬಳಸುವುದು ನಿಲ್ಲಿಸಬೇಕೆಂದು ತಿಳಿಸಿ ಹೇಳಿಕೆ ನೀಡಿರುತ್ತಾರೆ ಎಂದು ಹಿರಿಯ ಭೂವಿಜ್ಞಾನಿ ವರದಿಯಲ್ಲಿ ತಿಳಿಸಿರುತ್ತಾರೆ. ಕಾರ್ಕಳ ತಾಲ್ಲೂಕು ನಿಟ್ಟೆ ಗ್ರಾಮದ ಸರ್ವೇನಂ. 354/ಪಿ1ಬಿ ಯಲ್ಲಿ ಗುರುತಿಸಲಾಗಿರುವ ಸುರಕ್ಷಿತ ವಲಯವು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ನಿಯಂತ್ರಣ ಆಧ್ಯಾದೇಶ 2011ರ ಷರತ್ತುಗಳನ್ನು ಪೂರೈಸಿದ ಮೇಲೆ ಜಲ್ಲಿ ಕ್ರಷರ್ ಘಟಕಗಳಿಗೆ ಅನುಮತಿ ನೀಡುವ ಮೊದಲು ಕಂದಾಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗಿರುತ್ತದೆ. ದೂರುದಾರರ ಮನೆಯು ಕಲ್ಲುಗಣಿ ಗುತ್ತಿಗೆ ಪ್ರದೇಶ ಮತ್ತು ಜಲ್ಲಿ ಕ್ರಷರ್ ಘಟಕದಿಂದ 1 ಕಿ.ಮೀ., ಗಿಂತ ಹೆಚ್ಚಿನ ದೂರದಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ. ಇದಲ್ಲದೇ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಕಾರ್ಯಚರಣೆ ಅನುಮತಿ ಪ್ರಮಾಣ ಪತ್ರ (ಸಿಎಫ್ಒ) ನೀಡುವವರೆಗೆ ಕ್ರಷರ್ ಘಟಕ ಸ್ಥಗಿತಗೊಳಿಸುವಂತೆ ಸೂಚಿಸಿ ನೋಟೀಸ್ ನೀಡಲಾಗಿದ್ದು, ತಹಶೀಲ್ದಾರ್‌ರವರಿಗೆ ಪತ್ರ ಬರೆಯಲಾಗಿದೆ ಎಂದು ಹಿರಿಯ ಭುವಿಜ್ಞಾನಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ (ಸ್ಥಳ ಮಹಜರ್ ಪ್ರತಿಯನ್ನು ಹಾಜರುಪಡಿಸಲಾಗಿದೆ).

4. ದೂರುದಾರರಿಗೆ ಹಿರಿಯ ಭೂ ವಿಜ್ಞಾನಿರವರು ಸಲ್ಲಿಸಿದ್ದ ವರದಿಯ ಆಧಾರದ ಮೇಲೆ ಪ್ರತ್ಯುತ್ತರವನ್ನು ಸಲ್ಲಿಸಲು ಕೋರಲಾಗಿದ್ದು, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿ. ಹಿರಿಯ ಭೂ ವಿಜ್ಞಾನಿ ರವರು ಸಲ್ಲಿಸಿರುವ ವರದಿಯು ವಾಸ್ತವಾಂಶಗಳಿಗೆ ವಿರುದ್ಧವಾದ ವರದಿಯಾಗಿರುತ್ತದೆ. ಆದ್ದರಿಂದ, ಸದರಿ ವರದಿಯನ್ನು ಒಪ್ಪಿಕೊಳ್ಳಬಾರದೆಂದು ತಿಳಿಸಿರುತ್ತಾರೆ.

5. ಈ ಹಂತದಲ್ಲಿ ಉಡುಪಿಯ ಈ ಸಂಸ್ಥೆಯ ಆರಕ್ಷಕ ನಿರೀಕ್ಷಕರಿಗೆ ವರದಿ ಸಲ್ಲಿಸುವಂತೆ ಕೋರಲಾಗಿದ್ದು, ಸದರಿಯವರು ವರದಿಯನ್ನು ಸಲ್ಲಿಸಿದ್ದು, ಸದರಿಯವರು ದೂರಿನ ಬಗ್ಗೆ ಪರಿಶೀಲಿಸಲು ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಜತಾದ್ರಿ, ಉಡುಪಿ ಇವರನ್ನು ಕೋರಿದ್ದು, ಸದರಿ ಹಿರಿಯ ಭೂವಿಜ್ಞಾನಿಯವರು ತಿಳಿಸಿರುವಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಇವರ ವರದಿಯಂತೆ ಕಾರ್ಕಳ ತಾಲ್ಲೂಕು ನಿಟ್ಟೆ ಗ್ರಾಮದ ಸರ್ವೇ ನಂ. 517 ರಲ್ಲಿ ಯಾವುದೇ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡಿರುವುದಿಲ್ಲವೆಂದು ಹಾಗೂ ಕ್ರಷರ್ ಘಟಕದ ಸ್ಥಾಪನೆಯಾಗಿರುವುದಿಲ್ಲವೆಂದು

ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಆದರೆ, ಕಾರ್ಕಳ ತಾಲ್ಲೂಕು ಸರ್ವೇ ನಂಬರ್ 354/ಪಿ1ಬಿ ಯಲ್ಲಿ 1.50 ಎಕರೆ ಜಮೀನಿನಲ್ಲಿ ಶ್ರೀ ದಿನೇಶ್ ಶೆಟ್ಟಿಯವರಿಗೆ ಕಲ್ಲುಗಣಿ ಗುತ್ತಿಗೆಯನ್ನು ದಿ:21/06/2002 ರಿಂದ 10 ವರ್ಷಗಳ ಅವಧಿಗೆ ಮಂಜೂರಾತಿ ನೀಡಲಾಗಿದ್ದು, ದಿ:21/06/2012 ರಿಂದ ಮತ್ತೆ 10ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸಲಾಗಿದೆ ಎಂದು ಸದರಿ ಶ್ರೀ ದಿನೇಶ್ ಶೆಟ್ಟಿಯವರು ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಸ್ಫೋಟಕವನ್ನು ಉಪಯೋಗಿಸಲು ಪರವಾನಗೆಯನ್ನು ಹೊಂದಿರುತ್ತಾರೆಂದು ಸ್ಫೋಟಕದ ತೀವ್ರತೆಯನ್ನು ಅಳೆಯಲು ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನೋಲಜಿ, ಕರ್ನಾಟಕ, ಸೂರತ್ಕಲ್, ಮಂಗಳೂರು ಇವರಿಂದ ಸ್ಫೋಟಕ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ ಎಂದು ಸದರಿ ಕಲ್ಲುಗಣಿಗಾರಿಕೆ ಪ್ರದೇಶದಿಂದ ವಿವಿಧ ಹಂತದಲ್ಲಿ ಸಮೀಪ ಇರುವ ಜನ ವಸತಿ ಮನೆಗಳು ದೇವಸ್ಥಾನ ಹಾಗೂ ದೂರುದಾರರ ಮನೆ ಹತ್ತಿರ ಕಂಪನ ಅಳೆಯುವ ಉಪಕರಣವನ್ನು ಬಳಸಿ ಸ್ಫೋಟಕದ ತೀವ್ರತೆಯನ್ನು ಅಳೆಯಲಾಗಿರುತ್ತದೆ ಎಂದು ಆ ರೀತಿ ಅಳೆದ ಮಾಪನದ ಅಳತೆಯಂತೆ ಸ್ಫೋಟಕ ಉಪಯೋಗಿಸುತ್ತಿರುವುದರಿಂದ, ಸದರಿ ಕಲ್ಲು ಗಣಿ ಪ್ರದೇಶದ ಪರಿಸರದಲ್ಲಿರುವ ವಸತಿ ಮನೆಗಳು, ದೇವಸ್ಥಾನಗಳಿಗೆ ಯಾವುದೇ ರೀತಿಯ ಹಾನಿ ಉಂಟಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ನಿಯಂತ್ರಿತ ಸ್ಫೋಟಕ ವಿಧಾನದಲ್ಲಿ ಸ್ಫೋಟಕ ಬಳಸಲು ಶಿಫಾರಸ್ಸು ಮಾಡಿರುತ್ತಾರೆಂದು ಆದ್ದರಿಂದ, ಸದರಿ ಸ್ಫೋಟಕದ ಉಪಯೋಗದಿಂದ ದೂರುದಾರರ ಹಾಗೂ ಗಣಿಗಾರಿಕೆಯ ಪರಿಸರದ ಮೇಲೆ ಯಾವುದೇ ತೊಂದರೆ ಉಂಟಾಗುವ ಸಾಧ್ಯತೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಕಾರ್ಕಳ ತಾಲ್ಲೂಕಿನ ನಿಟ್ಟೆ ಗ್ರಾಮದ ಸರ್ವೇ ನಂಬರ್ 354/ಪಿ1ಬಿಯಲ್ಲಿ 2 ಎಕರೆಗೆ ಶ್ರೀ ಪ್ರಶಾಂತ್ ಕಾಮತ್ ರವರಿಗೆ ಕಲ್ಲುಗಣಿ ಗುತ್ತಿಗೆಯನ್ನು ದಿ:09/04/2010 ರಂದು 5 ವರ್ಷಗಳ ಅವಧಿಗೆ ಮಂಜೂರಾತಿ ನೀಡಲಾಗಿದ್ದು, ನಂತರ ಕೆಎಂಎಂಸಿ ನಿಯಮಾವಳಿ ಪ್ರಕಾರ ಗುತ್ತಿಗೆ ಅವಧಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸಲಾಗಿತ್ತೆಂದು, ಸದರಿ ಗಣಿ ಪ್ರದೇಶಕ್ಕೆ ಪರಿಸರ ವಿಮೋಚನ ಪತ್ರ ಬಂದಿರದ ಕಾರಣ ಸದರಿ ಪ್ರದೇಶದಲ್ಲಿ ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆ ಎಂದು ತಿಳಿಸಿರುತ್ತಾರೆ.

6. ಕಾರ್ಕಳ ತಾಲ್ಲೂಕು ನಿಟ್ಟೆ ಗ್ರಾಮದ ಸರ್ವೇ ನಂ. 354/ಪಿ1ಬಿಯಲ್ಲಿನ 16 ಎಕರೆ ವಿಸ್ತೀರ್ಣಕ್ಕೆ ಕಲ್ಲುಪುಡಿ ಮಾಡುವ ನಿಯಂತ್ರಣ ಆಧ್ಯಾದೇಶ 2011 ರನ್ವಯ ದಿ:13/12/2011 ರಂದು ಸುರಕ್ಷಿತ ವಲಯವೆಂದು ಘೋಷಿಸಿ ಅಧಿಸೂಚನೆ ಜಾರಿಮಾಡಲಾಗಿರುತ್ತದೆ. ಸದರಿ ವಲಯದಲ್ಲಿ ಶ್ರೀ ಪ್ರಶಾಂತ್ ಕಾಮತ್ ರವರಿಗೆ ಸೇರಿದ ದಾಮೋದರ್ ಕ್ರಷರ್ ಹಾಗೂ ಶ್ರೀದಿನೇಶ್ ಶೆಟ್ಟಿಯವರಿಗೆ ಸೇರಿದ ಮಹಾಗಣಪತಿ ಕ್ರಷರ್‌ಗಳಿಗೆ ತಲಾ 2 ಎಕರೆಗೆ ಫಾರಂ–ಸಿ(ಲೈಸೆನ್ಸ್) ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಕ್ರಷರ್‌ಗಳಿಗೆ ದಿ:20/08/2016 ರವರೆಗೆ ಕಾರ್ಯನಿರ್ವಹಿಸಲು ಸಿಎಫ್‌ಒ

ನೀಡಲಾಗಿರುತ್ತದೆ. ಪ್ರಸ್ತುತ ದಾಮೋದರ್ ಕ್ರಷರ್ ಕಾರ್ಯನಿರ್ವಹಿಸುತ್ತಿದ್ದು, ಮಹಾಗಣಪತಿ ಕ್ರಷರ್‌ರವರು ಹೊಸ ಯಂತ್ರ ಜೋಡಣೆ ನಿಮಿತ್ತ ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಕಾರ್ಕಳ ತಾಲ್ಲೂಕಿನ ಸರ್ವೇ ನಂಬರ್ 354 ರಲ್ಲಿ ಶ್ರೀ ದಿನೇಶ್ ಶೆಟ್ಟಿಯವರಿಗೆ 2 ಎಕರೆ ಶ್ರೀ ಪ್ರಶಾಂತ್ ಕಾಮತ್ ರವರಿಗೆ 2 ಎಕರೆ ಶ್ರೀಮತಿ ಅಮೃತವತಿ ಇವರಿಗೆ 1 ಎಕರೆ, ಶ್ರೀ ನವೀನ್ ದೇವಾಡಿಗ ಇವರಿಗೆ 0.50 ಎಕರೆ ಹಾಗೂ ಶ್ರೀ ಪ್ರಭಾಕರ್ ಆಚಾರ್ಯರವರಿಗೆ 0.50 ಎಕರೆ ಪ್ರದೇಶಗಳಿಗೆ ಕಲ್ಲುಗಣಿ ಗುತ್ತಿಗೆಗಾಗಿ ಅಧಿಸೂಚನೆ ಜಾರಿಗೊಳಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ, ತನಿಖಾಧಿಕಾರಿವರು ಶ್ರೀ ಪ್ರಶಾಂತ್ ಕಾಮತ್ ಹಾಗೂ ಶ್ರೀ ದಿನೇಶ್ ಶೆಟ್ಟಿಯವರ ಕಲ್ಲುಗಣಿಗಾರಿಕೆಗೆ ಸ್ಫೋಟಕಗಳನ್ನು ಬಳಸುತ್ತಿರುವುದರಿಂದ, ಎನ್‌ಐಟಿಕೆ ಸೂರತ್ಕಲ್ ರವರ ವರದಿಯಂತೆ ಪರಿಸರದ ಮನೆಗಳಿಗಾಗಲೀ, ದೇವಸ್ಥಾನಕ್ಕಾಗಲೀ ಯಾವುದೇ ತೊಂದರೆ ಇಲ್ಲವೆಂದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಕ್ರಷರ್‌ಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಉಡುಪಿ ಇವರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪರಿಸರ ಅಧಿಕಾರಿಗಳು ಮಂಡಳಿಯು ನಿಗಧಿಪಡಿಸಿರುವ ಕೆಲವು ನಿಬಂಧನೆಗಳ ಉಲ್ಲಂಘನೆಗಾಗಿ ಕ್ರಷರ್ ಘಟಕದ ಮಾಲೀಕರಿಗೆ ನೋಟೀಸ್ ನೀಡಲಾಗಿದೆ ಎಂದು ಹಾಗೂ ರಾತ್ರಿ ವೇಳೆಯಲ್ಲಿ ಕ್ರಷರ್ ಅನ್ನು ಚಾಲನೆ ಮಾಡದೇ ಇರುವ ಬಗ್ಗೆ ಛಾಪಾ ಕಾಗದದಲ್ಲಿ ಪ್ರಮಾಣ ಪತ್ರವನ್ನು ಪಡೆದಿರುವುದಾಗಿಯೂ ವರದಿಯಲ್ಲಿ ಹಿರಿಯ ಭೂವಿಜ್ಞಾನಿಯವರು ತಿಳಿಸಿರುತ್ತಾರೆಂದು ತನಿಖಾಧಿಕಾರಿಯವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

7. ಸದರಿ ತನಿಖಾಧಿಕಾರಿಯವರ ವರದಿಯ ಪ್ರತಿಯನ್ನು ದೂರುದಾರರಿಗೆ ರವಾನಿಸಿ ಅವರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ನೀಡಿರುವುದಿಲ್ಲ.

8. ದೂರಿನಂಶಗಳನ್ನು, ತನಿಖಾಧಿಕಾರಿಯವರ ವರದಿಯನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಕಾರ್ಕಳ ತಾಲ್ಲೂಕಿನ ತಹಶೀಲ್ದಾರ್ ರವರು ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಉಡುಪಿ ಇವರಿಗೆ ದಿ:13/01/2015 ರಂದು ಪತ್ರ ಬರೆದಿದ್ದು, ಅದರಲ್ಲಿ ಜಂಟಿ ತನಿಖೆಯ ಬಗ್ಗೆ ಭೂಮಾಪಕರಾದ ಶ್ರೀ ರಾಘವೇಂದ್ರ ವೈದ್ಯರವರನ್ನು ನಿಯೋಜಿಸಿದ್ದು, ಅವರು ಅಳತೆ ಕಾರ್ಯವನ್ನು ಮಾಡಿರುತ್ತಾರೆ. ಸದರಿ ಜಂಟಿ ತನಿಖಾ ಸಮಯದಲ್ಲಿ ತಾನು ಸಹ ಉಪಸ್ಥಿತನಿದ್ದು ಸ್ಥಳ ಪರಿಶೀಲಿಸಿರುತ್ತೇನೆಂದು, ಗಣಿಗಾರಿಕೆಗೆ ಆಸುಪಾಸು ಮನೆಯವರ ಆಕ್ಷೇಪಣೆ ಇರುವುದಿಲ್ಲವೆಂದು ಹಾಗೂ ಸದರಿ ಗಣಿಗಾರಿಕೆ ಸ್ಥಳದಿಂದ 1.00 ಕಿ.ಮೀ., ದೂರದಲ್ಲಿ ವಾಸವಿರುತ್ತಾರೆಂದು, ಕಲ್ಲುಗಣಿಗಾರಿಕೆ ಮಾಡುವ ಸ್ಥಳದಿಂದ ಮತ್ತು ಕ್ರಷರ್ ಸ್ಥಳದಿಂದ ಪರಿಸರದ ಮನೆಗಳು ಸಾಕಷ್ಟು ದೂರದಲ್ಲಿ ಇರುತ್ತದೆ ಎಂದು ಆದ್ದರಿಂದ ನಿಯಮಾವಳಿಗಳನ್ನು ಅನುಸರಿಸಿ

ಗಣಿಗಾರಿಕೆಗೆ ಮತ್ತು ಕ್ರಷರ್‌ಗೆ ಅನುಮತಿ ನೀಡಬಹುದೆಂದು ಅಭಿಪ್ರಾಯ ನೀಡಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಆದರೆ, ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನೋಲಜಿ ಇದರ ಪ್ರೋಫೆಸರ್ ಮತ್ತು ತಜ್ಞರು ಆದ ಡಾ. ವಿ.ಆರ್ ಶಾಸ್ತ್ರಿ ರವರು ನೀಡಿರುವ ವರದಿಯನ್ನು ಪರಿಶೀಲಿಸಿದಲ್ಲಿ ಶ್ರೀ ರಘು ಮೂಲ್ಯ ಇವರ ಮನೆಯು 310.00 ಮೀ., ದೂರದಲ್ಲಿರುತ್ತದೆ ಎಂದು ಜುಮ್ಮಾದಿ ದೇವಸ್ಥಾನ 320.00 ಮೀ., ದೂರದಲ್ಲಿರುತ್ತದೆ ಎಂದು ಶ್ರೀ ಸುಧಾಕರ್ ರವರ ಮನೆಯು 512.00 ಮೀ., ದೂರದಲ್ಲಿರುತ್ತದೆ ಎಂದು ದೂರುದಾರರಾದ ಶ್ರೀಮತಿ ಬೆನೆಡಿಕ್ಟ್ ಡಿಸೋಜ ಇವರ ಮನೆಯು 1380 ಮೀ., ದೂರದಲ್ಲಿರುತ್ತದೆ ಎಂದು ತೋರಿಸಿರುತ್ತಾರೆ. ಈ ವರದಿಯು ತಹಶೀಲ್ದಾರ್‌ರವರು ನೀಡಿರುವ ವರದಿಗೆ ವ್ಯತಿರಿಕ್ತವಾಗಿರುತ್ತದೆ. ತಹಶೀಲ್ದಾರ್‌ರವರು ಪರಿಸರದ ಮನೆಗಳು 1.00 ಕಿ.ಮೀ., ಗಿಂತ ದೂರದಲ್ಲಿರುತ್ತದೆ ಎಂದು ತಿಳಿಸಿದ್ದರೆ, ಮೇಲೆ ಹೇಳಿದ ತಜ್ಞರು ಕೆಲವು ಕಟ್ಟಡಗಲು 310.00 ಮೀ., 320.00 ಮೀ., ಅಂತರದಲ್ಲಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ಹಿರಿಯ ಭೂ ವಿಜ್ಞಾನಿಯವರು ಹಾಗೂ ತನಿಖಾಧಿಕಾರಿಯಾದ ಆರಕ್ಷಕ ನಿರೀಕ್ಷಕು, ಕಲೋ., ಉಡುಪಿ ಇವರು ನೀಡಿರುವ ವರದಿಗಳ ಬಗ್ಗೆ ಅನುಮಾನ ಉಂಟಾಗಿರುತ್ತದೆ. ಇದಲ್ಲದೇ, ತಹಶೀಲ್ದಾರ್ ರವರು ತಮ್ಮ ಮೇಲೆ ಹೇಳಿದ ಪತ್ರದಲ್ಲಿ ಪರಿಸರ ಮಾಲಿನ್ಯವಾಗದಂತೆ ನೀರನ್ನು ಸರಿಪಡಿಸಲು ಗಿಡಗಳನ್ನು ಬೆಳೆಸಿ ಹಸಿರುವಲಯಗಳನ್ನು ಅಭಿವೃದ್ಧಿಪಡಿಸಲು ಸೂಚಿಸಲು ತಿಳಿಸಿರುತ್ತಾರೆ. ಹಾಗೆಯೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಉಡುಪಿ ಇಲ್ಲಿಯ ತಜ್ಞರು ತಮ್ಮ ವರದಿಯಲ್ಲಿ ಕ್ರಷರ್ ಘಟಕಗಳು ಮಂಡಳಿಯಿಂದ ನಿಗಧಿಪಡಿಸಿರುವ ಕೆಲಸವು ನಿಬಂಧನೆಗಳನ್ನು ಉಲ್ಲಂಘಿಸಿರುತ್ತಾರೆಂದು ಈ ಬಗ್ಗೆ ಸಂಬಂಧಪಟ್ಟವರಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ ಎಂದು ಹಾಗೂ ಸದರಿ ಕ್ರಷರ್‌ಗಳ ಘಟಕದ ಮಾಲೀಕರು ರಾತ್ರಿ ವೇಳೆಯಲ್ಲಿ ಕ್ರಷರ್‌ಗಳನ್ನು ಚಾಲನೆ ಮಾಡುವುದಿಲ್ಲವೆಂದು ತಿಳಿಸಿ ಛಾಪಾ ಕಾಗದದಲ್ಲಿ ಪ್ರಮಾಣ ಪತ್ರವನ್ನು ನೀಡಿರುತ್ತಾರೆಂದು ತಿಳಿಸಿರುತ್ತಾರೆ.

9. ಈ ಅಂಶಗಳನ್ನು ಪರಿಶೀಲಿಸಿದಲ್ಲಿ ಕ್ರಷರ್‌ಘಟಕದ ಮಾಲೀಕರುಗಳು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ವಿಧಿಸಲಾಗಿದ್ದ ನಿಬಂಧನೆಗಳನ್ನು ಉಲ್ಲಂಘಿಸಿ ಕ್ರಷರ್‌ಗಳನ್ನು ನಡೆಸುತ್ತಿದ್ದರೆಂದು ಕಂಡು ಬರುತ್ತದೆ. ಹಾಗೂ ಪರಿಸರ ಅಧಿಕಾರಿಯವರು ಕ್ರಷರ್‌ಗಳನ್ನು ನಡೆಸುವುದರಿಂದ ಶಬ್ದ ಮಾಲಿನ್ಯದ ಪ್ರಮಾಣವನ್ನು ಅಳತೆ ಮಾಡುವ ಅವಶ್ಯಕತೆ ಇದ್ದಲ್ಲಿ ತಮ್ಮ ಕಚೇರಿಯಿಂದ ದಿನಾಂಕವನ್ನು ಗೊತ್ತುಪಡಿಸಿದಲ್ಲಿ ತಮ್ಮ ಕಛೇರಿಯ ಅಧಿಕಾರಿಗಳ ಜೊತೆಗೂಡಿ ಶಬ್ದ ಪ್ರಮಾಣದ ಮಾಪನವನ್ನು ಮಾಡಿಕೊಳ್ಳಲಾಗುವುದೆಂದು ಹಿರಿಯ ಭೂವಿಜ್ಞಾನಿ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಇವರಿಗೆ ತಿಳಿಸಿರುವುದು ಕಂಡು ಬರುತ್ತದೆ (ಸದರಿ ಪರಿಸರ ಅಧಿಕಾರಿಯವರ ಪತ್ರದ ಪ್ರತಿಯನ್ನು

ಹಾಜರುಪಡಿಸಲಾಗಿದೆ). ಇದರಿಂದ ಶಬ್ದ ಮಾಲಿನ್ಯದ ಬಗ್ಗೆ ಹಿರಿಯ ಭೂ ವಿಜ್ಞಾನಿಯವರು ವರದಿಯನ್ನು ಪಡಿದಿಲ್ಲವೆಂಬುದು ಸ್ಪಷ್ಟ ಪಡುತ್ತದೆ. ಹಾಗೂ ಕ್ರಷರ್‌ಗಳನ್ನು ನಡೆಸುತ್ತಿದ್ದರಿಂದ, ವಾಯುಮಾಲಿನ್ಯ ವಾಗಿರುವ ಬಗ್ಗೆ ಸಹ ತಿಳಿಸಿರುವುದು ಕಂಡು ಬರುತ್ತದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ತಿಳಿಸಿರುವಂತೆ ಸ್ಫೋಟಕ ಬಳಸಿ ಗಣಿಗಾರಿಕೆ ನಡೆಸುತ್ತಿರುವುದರಿಂದ ಹಾಗೂ ಕ್ರಷರ್‌ಗಳನ್ನು ನಡೆಸುತ್ತಿರುವುದರಿಂದ ಪರಿಸರ ಮಾಲಿನ್ಯವಾಗುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಕಾರ್ಕಳ ತಾಲ್ಲೂಕು ನಿಟ್ಟೆ ಗ್ರಾಮದ ಸರ್ವೇ ನಂ. 354ರಲ್ಲಿ ಕಲ್ಲು ಗಣಿಗಾರಿಕೆಯಿಂದ ಮತ್ತು ಕಲ್ಲುಪುಡಿ ಮಾಡುವ ಘಟಕದಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಕಾನೂನಿನಡಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 26/4/17.

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 26/4/17